January 2023
ವಿತ್ತ ಸಂಚಿಕೆ

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞ

**ಸಲಹೆ ನಮ್ಮದು ಹೂಡಿಕೆ ನಿಮ್ಮದು**

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar
Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com

## ಹೊಸ ವರ್ಷದ ಶುಭಾಶಯಗಳು




## ಹರುಷದ ಹೂಡಿಕೆಯ ವರುಷವಾಗಲಿ 2023

# ಹೂಡಿಕೆದಾರರಿಗೂ ಇದೆ ನಡವಳಿಕೆ!

ನೀವು ಹೂಡಿಕೆ ಮಾಡಿದ ಹಣಕ್ಕೆ ನಿಮಗೆ ಅತ್ಯುತ್ತಮವಾದ ಆದಾಯವೇ ಬಂದಿರುತ್ತದೆ. ಆದರೂ ಬಂದಿರುವ ಆದಾಯ ಕಡಿಮೆಯೇ ಆಗಿದೆಯಲ್ಲ ಎಂದು ನಿಮಗೆ ಆಶ್ಚರ್ಯವಾಗಿದೆಯೇ? ಹಾಗೆ ಅನಿಸಿರುವುದು ನಿಮಗೆ ಮಾತ್ರವಲ್ಲ. ಯಾವುದೇ ಮಾರುಕಟ್ಟೆ ಹೂಡಿಕೆಯಲ್ಲಿ ಎರಡು ರೀತಿಯ ಆದಾಯ ಅಥವಾ ನಿರ್ವಹಣೆ ಲಭ್ಯವಾಗುತ್ತದೆ. ಮೊದಲನೆಯದು ನೈಜ ಮಾರುಕಟ್ಟೆ ಆದಾಯ/ನಿರ್ವಹಣೆ ಮತ್ತು ಎರಡನೆಯದು ಹೂಡಿಕೆಯನ್ನು ಹೊಂದಿರುವ ಹೂಡಿಕೆದಾರನ ಆದಾಯ/ನಿರ್ವಹಣೆ. ನಮ್ಮಲ್ಲಿ ಹೆಚ್ಚಿನವರು ಯೋಚಿಸುವುದು ಏನೆಂದರೆ ಇವೆರಡರಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಎಂದು. ಆದರೆ ಕೆಲವೊಮ್ಮೆ ವಾಸ್ತವ ಬೇರೆಯೇ ಆಗಿರುತ್ತದೆ. ಅದರಲ್ಲಿಯೂ ಮುಖ್ಯವಾಗಿ ಸುದೀರ್ಘಾವಧಿ ಹೂಡಿಕೆಯಲ್ಲಿ.

ಸುದೀರ್ಘಾವಧಿ ಫಲಿತಾಂಶಗಳ ಮೇಲೆ ಅತ್ಯಂತ ಹೆಚ್ಚು ಪರಿಣಾಮ ಬೀರುವ ಅಂಶವೆಂದರೆ ಹೂಡಿಕೆದಾರರ ನಡವಳಿಕೆ. ಈ ವಿಚಾರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿದ್ದು ಇದನ್ನು 'ನಡವಳಿಕೆಗೆ ಸಂಬಂಧಿಸಿದ ಹಣಕಾಸು' ಎಂದು ಕರೆಯಲಾಗುತ್ತದೆ. ನೈಜ ಜಗತ್ತಿನಲ್ಲಿ ಹೂಡಿಕೆದಾರರ ನಡವಳಿಕೆಗಳೇ ಇಲ್ಲಿ ಹಣಕಾಸು ಸಂಬಂಧಿ ನಡವಳಿಕೆಗಳಾಗಿರುತ್ತವೆ. ಇದು ತಮ್ಮ ಗಳಿಕೆಯನ್ನು ದುಪ್ಪಟ್ಟುಗೊಳಿಸುವ ಭರದಲ್ಲಿ ಭರಪೂರ ನಿರ್ಧಾರಗಳನ್ನು ಕೈಗೊಳ್ಳಲು ಎಲ್ಲರೂ ವಿವೇಚನೆಯಿಂದ ವರ್ತಿಸುವಂತೆ ಮಾಡುವ ಮುಂಚೂಣಿ ಮಾರುಕಟ್ಟೆ ಊಹೆಗಳಿಗೆ ವಿರುದ್ಧವಾಗಿದೆ. ನಾವು ಮಾಡುವ ಹೂಡಿಕೆ ನಿರ್ಧಾರಗಳ ಮೇಲೆ ನಮ್ಮ ಸಾಮಾಜಿಕ, ಭಾವನಾತ್ಮಕ ಮತ್ತು ಅರಿವಿನ ಅಂಶಗಳು ಪರಿಣಾಮ ಬೀರುತ್ತವೆ ಎಂಬುದನ್ನು ಹಣಕಾಸು ಸಂಬಂಧಿ ನಡವಳಿಕೆಗಳಿಂದ ಸಾಬೀತಾಗಿದೆ. ಇದರಿಂದಾಗಿ ನಾವು ನಿಜಕ್ಕೂ ವಿವೇಚನೆಯಿಂದ ಹೂಡಿಕೆ ಮಾಡದಂತಾಗುತ್ತದೆ. ಈ ಹಣಕಾಸು ಸಂಬಂಧಿ ನಡವಳಿಕೆಗಳ ಪೂರ್ವಗ್ರಹಗಳು ನಮ್ಮ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಕುಂದಿಸುತ್ತವೆ ಮತ್ತು ಹೂಡಿಕೆಯ ನಿರ್ವಹಣೆ ಅಥವಾ ಹೂಡಿಕೆಯಲ್ಲಿನ ಸುದೀರ್ಘಾವಧಿ ಯಶಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತವೆ. ಇದು ನಾವು ಯೋಚನೆ ಮಾಡುವುದಕ್ಕಿಂತ ಹೆಚ್ಚು ಸಾಮಾನ್ಯ ಸಂಗತಿಯಾಗಿದೆ. ಇದರಿಂದ ನಾವು ಇಲ್ಲಿ ಪ್ರಸ್ತಾಪ ಮಾಡುತ್ತಿರುವ 'ನಡವಳಿಕೆ ಅಂತರ'ಕ್ಕೆ ಕಾರಣವಾಗುತ್ತದೆ.



ಒಳ ಪುಟ ನೋಟ

ಸಂಪತ್ತು ಸೃಷ್ಟಿಯ ಸಪ್ತ ಸೂತ್ರಗಳು 3



ಹಣಕಾಸು ಸೌಖ್ಯದಲ್ಲಿ ವಿಮೆಯ ಪಾತ್ರ 5



## ನಡವಳಿಕೆ ಅಂತರ:

ಅನೇಕ ಮಾರುಕಟ್ಟೆಗಳು ಮತ್ತು ಬಹು ಅಧ್ಯಯನಗಳಿಂದ ದಕ್ಕಿರುವ ಅಂಶಗಳು ಹಾಗೂ ಐತಿಹಾಸಿಕ ದಾಖಲೆಗಳನ್ನು ಗಮನಿಸಿದರೆ ಹೂಡಿಕೆದಾರರ ನಿರ್ವಹಣೆಗಿಂತ ಮಾರುಕಟ್ಟೆ ನಿರ್ವಹಣೆಯೇ ಹೆಚ್ಚು ಎತ್ತರದಲ್ಲಿದೆ ಎಂಬುದು ಸಾಬೀತಾಗಿದೆ. ಇದಕ್ಕೆ ಅನೇಕ ದಶಕಗಳ ವಿಶ್ವದ ನಾನಾ ರಾಷ್ಟ್ರಗಳ ಮಾರುಕಟ್ಟೆ/ಹೂಡಿಕೆಯನ್ನು ಗಮನಿಸಬಹುದು. ಹೂಡಿಕೆಯ ಕ್ಷೇತ್ರಗಳು ಬೇರೆಬೇರೆಯಾದರೂ ಕೂಡ ಫಲಿತಾಂಶಗಳು ಕೆಲವೊಮ್ಮೆ ಒಂದೇ ಆಗಿರುತ್ತವೆ. ಒಂದು ನಿರ್ದಿಷ್ಟವಾದ ಕಾಲಮಿತಿಯಲ್ಲಿ ಒಂದು ಹೂಡಿಕೆ ಸುವ್ಯವಸ್ಥಿತವಾಗಿ ಮಾಡುವ ಉತ್ಪಾದನೆ ಮತ್ತು ಆ ಹೂಡಿಕೆಯಲ್ಲಿ ಒಬ್ಬ ಹೂಡಿಕೆದಾರನು ನಿಜವಾಗಿ ಗಳಿಸುವ ಆದಾಯದ ನಡುವಿನ ವ್ಯತ್ಯಾಸವನ್ನು 'ನಡವಳಿಕೆಯ ಅಂತರ' ಎಂದು ವಿಶ್ಲೇಷಿಸಲಾಗುತ್ತದೆ.

ಕಳೆದ 22 ವರ್ಷಗಳಿಂದ 'ಹೂಡಿಕೆದಾರರ ನಡವಳಿಕೆಯ ಪ್ರಮಾಣಾತ್ಮಕ ವಿಶ್ಲೇಷಣೆ' ಕುರಿತು ಪ್ರತಿವರ್ಷ 'ದಲ್‌ಬಾರ್' ಸಂಸ್ಥೆಯು ಜನಪ್ರಿಯ ಸಂಶೋಧನಾ ವರದಿಯನ್ನು ಪ್ರಕಟಿಸುತ್ತದೆ. 2022ರ ಡಿಸೆಂಬರ್ 31ರಂದು ಕೊನೆಗೊಳ್ಳುವ ಅವಧಿಗಾಗಿ ಪ್ರಕಟಿಸಲಾದ ವರದಿಯ ಸಂಕ್ಷಿಪ್ತ ಭಾಗವನ್ನು ಕೋಷ್ಟಕದಲ್ಲಿ ಪ್ರಕಟಿಸಲಾಗಿದೆ.

| ಅವಧಿ | 30 ವರ್ಷ | 20 ವರ್ಷ | 10 ವರ್ಷ | 5 ವರ್ಷ | 3 ವರ್ಷ | 1 ವರ್ಷ |
|---|---|---|---|---|---|---|
| ಸರಾಸರಿ ಈಕ್ವಿಟಿ ಫಂಡ್ ಹೂಡಿಕೆದಾರರು % | 7.13 | 8.13 | 13.44 | 14.80 | 21.56 | 18.39 |
| ಎಸ್&ಪಿ500 % | 10.65 | 9.52 | 16.55 | 18.47 | 26.07 | 28.71 |
| ನಡವಳಿಕೆಯ ಅಂತರ | 3.52 | 1.39 | 3.11 | 3.67 | 4.51 | 10.32 |

**ಯಶಸ್ವೀ ಹೂಡಿಕೆದಾರರು ಕೆಲವು ವಿಶಿಷ್ಟ ಗುಣಗಳನ್ನು ಹೊಂದಿರುತ್ತಾರೆ. ಅವರು ಹೆಚ್ಚು ವಿವೇಚನಯುತವಾಗಿ ಯೋಚಿಸುತ್ತಾರೆ. ಅವರು ತಮ್ಮ ವೈಯಕ್ತಿಕ ಪೂರ್ವಗ್ರಹಗಳು ಹೂಡಿಕೆಗಳ ಮೇಲೆ ಪರಿಣಾಮ ಬೀರದಂತೆ ಎಚ್ಚರಿಕೆಯನ್ನು ವಹಿಸುತ್ತಾರೆ. ಅವರು ಹೂಡಿಕೆ ವಿಚಾರದಲ್ಲಿ ಹೆಚ್ಚು ತಾಳ್ಮೆಯನ್ನು ಕಾಯ್ದುಕೊಳ್ಳುತ್ತಾರೆ.**



ಇಲ್ಲಿ ಸ್ಪಷ್ಟವಾಗಿ ಗೋಚರಿಸುವಂತೆ ಅಮೆರಿಕದ ಬಹುದೊಡ್ಡ ಷೇರು ಮಾರುಕಟ್ಟೆ ಕಳೆದ 30 ವರ್ಷಗಳ ಅವಧಿಯಲ್ಲಿ ಸರಾಸರಿ ಈಕ್ವಿಟಿ ಫಂಡ್ ಹೂಡಿಕೆಯಲ್ಲಿ ಗಣನೀಯ ಪ್ರಮಾಣದಲ್ಲಿ ಮಿತಿ ಮೀರಿದ ಸಾಧನೆಯನ್ನು ಮಾಡಿದೆ. ಆಸಕ್ತಿಯ ಸಂಗತಿ ಏನೆಂದರೆ ಸರಿಸುಮಾರು ಎಲ್ಲ ಹೋಲ್ಡಿಂಗ್‌ನ ಅವಧಿಗಳಲ್ಲಿ ಈ ಅಭೂತಪೂರ್ವವಾದ ಸಾಧನೆಯನ್ನು ಮಾಡಬಹುದು. 'ದಲ್‌ಬಾರ್' ಕೈಗೊಂಡಿರುವ ಹಿಂದಿನ ಎಲ್ಲ ಅಧ್ಯಯನಗಳಲ್ಲಿ ಇದೇ ರೀತಿಯ ಫಲಿತಾಂಶಗಳು ಕಂಡುಬಂದಿದ್ದವು. ಇನ್ನೂ ಅನೇಕ ಅಧ್ಯಯನಗಳು ಕೂಡ ಇದೇ ರೀತಿಯ ಫಲಿತಾಂಶಗಳನ್ನು ನೀಡಿದ್ದವು ಎಂಬುದು ಗಮನಾರ್ಹ.

ಅದೇ ರೀತಿಯಲ್ಲಿ 2003ರಿಂದ 2022ರ ವರೆಗಿನ ಅವಧಿಯಲ್ಲಿ ಒಂದು ದೇಶೀಯ ಫಂಡ್ ಸಂಸ್ಥೆ ಇಂತಹುದೇ ಅಧ್ಯಯನವನ್ನು ಕೈಗೊಂಡಿತ್ತು. ಅದರ ಪ್ರಕಾರ ಈಕ್ವಿಟಿ ಫಂಡ್‌ಗಳು ಶೇ.19.1ರಷ್ಟು ಪರಿಣಾಮಕಾರಿ ಆದಾಯವನ್ನು ತೋರಿಸಿದ್ದವು. ಆದರೆ ಹೂಡಿಕೆದಾರರ ಆದಾಯ ಕೇವಲ ಶೇ.13.8ರಷ್ಟು ಮಾತ್ರ. ಒಟ್ಟಾರೆಯಾಗಿ ಸರಿಸುಮಾರು 20 ವರ್ಷಗಳ ಅವಧಿಯಲ್ಲಿನ ಹೂಡಿಕೆಯ ಮಿತಿಮೀರಿದ ಸಾಧನೆ ಶೇ.38ರಷ್ಟು. ಇದು ನಿಜಕ್ಕೂ ದಿಗಿಲುಹುಟ್ಟಿಸುವ ಅಂಶ ಎಂದು ಹೇಳುವುದರಲ್ಲಿ ಯಾವುದೇ ಅನುಮಾನವಿಲ್ಲ.

ಅಂತಿಮವಾಗಿ ಫಲಿತಾಂಶ ತುಂಬಾ ಸರಳ– ಭಾರತದ ಈಕ್ವಿಟಿ ಹೂಡಿಕೆದಾರರು ಕಳೆದ ಎರಡು ದಶಕಗಳ ಅವಧಿಯಲ್ಲಿ ಇತರೆಲ್ಲ ಆಸ್ತಿ ವರ್ಗಗಳಲ್ಲಿ ಅಭೂತಪೂರ್ವ ನಿರ್ವಹಣೆಯನ್ನು ತೋರುವ ಮೂಲಕ ಸಂಪತ್ತನ್ನು ಸೃಷ್ಟಿಸಿದರೂ ಕೂಡ ತನ್ನದೇ ಆದ ನಡವಳಿಕೆಯ ಕಾರಣಗಳಿಂದ ಸಂಪತ್ತು ಸೃಷ್ಟಿಯ ಇನ್ನೂ ಅನೇಕ ಅವಕಾಶಗಳನ್ನು ಕಳೆದುಕೊಂಡಿದ್ದಾರೆ ಎಂಬುದು ಮಾತ್ರ ಸ್ಪಷ್ಟವಾಗುತ್ತದೆ.

## ಹೂಡಿಕೆದಾರ ಏನು ಮಾಡಬೇಕು:

ಎಷ್ಟೋ ಪ್ರಕರಣಗಳಲ್ಲಿ ಇರುವಂತೆ ಹೂಡಿಕೆಯಲ್ಲಿ ಯಶಸ್ಸನ್ನು ಕಾಣದೇ ಇರುವುದಕ್ಕೆ ಬಹುದೊಡ್ಡ ಅಡೆ–ತಡೆ ಎಂದರೆ ಅದು ಹೂಡಿಕೆದಾರರ ನಡವಳಿಕೆ. ಅನೇಕ ಬಾರಿ ಇದು ಪೂರ್ವಗ್ರಹಗಳು ಮತ್ತು ಭಾವನಾತ್ಮಕ ಸಮಸ್ಯೆಗಳಿಂದ ತುಂಬಿರುತ್ತವೆ. ತಾವು ಮಾಡುವ ಹೂಡಿಕೆ ನಿರ್ಧಾರಗಳ ಮೇಲೆ ಪೂರ್ವಗ್ರಹ ಮತ್ತು ಭಾವನೆಗಳು ಸವಾರಿ ಮಾಡಲು ಅವಕಾಶ ನೀಡುತ್ತಾರೆ. ಮಾರುಕಟ್ಟೆಯಲ್ಲಿ 'ಭಯ–ದುರಾಸೆ–ಭರವಸೆ'ಯಂತಹ ಭಾವನೆಗಳು ಬೀರುವ ಪರಿಣಾಮದ ಬಗ್ಗೆ ನಾವು ಆಗಾಗ ಕೇಳಿದ್ದೇವೆ. ಮಾರುಕಟ್ಟೆ ಕೆಳಮುಖವಾಗಿದ್ದಾಗ ಹೂಡಿಕೆದಾರರು ಭಯ–ಆತಂಕಕ್ಕೆ ಒಳಗಾಗಿ ಮಾರಾಟ ಮಾಡುತ್ತಾರೆ ಮತ್ತು ಮಾರುಕಟ್ಟೆ ಏರುಗತಿಯಲ್ಲಿದ್ದಾಗ ದುರಾಸೆಗೆ ಬಿದ್ದು ಖರೀದಿಯಲ್ಲಿ ತೊಡಗುತ್ತಾರೆ. ಆದರೆ ಇವೆಲ್ಲ ವೈಯಕ್ತಿಕ ಪೂರ್ವಗ್ರಹಗಳು ಮತ್ತು ಭಾವನೆಗಳನ್ನು ಹತ್ತಿಕ್ಕಿ ನೈಜ ಜೀವನದಲ್ಲಿ ತಾರ್ಕಿಕವಾದ ನಿರ್ಧಾರಗಳನ್ನು ಕೈಗೊಳ್ಳುವುದು ನಿಜಕ್ಕೂ ಕಷ್ಟದ ಕೆಲಸವೇ ಸರಿ.

ಇವೆಲ್ಲದರ ನಡುವೆ ಧನಾತ್ಮಕ ಅಂಶಗಳು ಕೂಡ ಇವೆ ಎನ್ನುವುದನ್ನು ಮಾತ್ರ ಮರೆಯುವ ಹಾಗಿಲ್ಲ. ಇದಕ್ಕೆ ನಾವು ನಮ್ಮ ಸುತ್ತಮುತ್ತ ಇರುವ ಅನೇಕ ಪ್ರಸಿದ್ಧ ಹಾಗೂ ಯಶಸ್ವೀ ಹೂಡಿಕೆದಾರರನ್ನು ಹೆಸರಿಸಬಹುದು. ಅವರೆಲ್ಲರೂ ಯಾವುದೇ ಸದ್ದಿಲ್ಲದೆ ತಮ್ಮ ಯಶಸ್ಸನ್ನು ಅನುಭವಿಸುತ್ತಿದ್ದಾರೆ ಕೂಡ. ನಾವು ಮೇಲೆ ಪ್ರಸ್ತಾಪ ಮಾಡಿದ ಅನೇಕ ಅಂಶಗಳನ್ನು ಮೀರಿ ಬೆಳೆದ ಹೂಡಿಕೆದಾರರು ಇವರೆಲ್ಲ. ಅವರೂ ಕೆಲವು ತಪ್ಪುಗಳನ್ನು ಮಾಡಿದ್ದಾರೆ, ತಮ್ಮನ್ನು ತಾವು ಸರಿಪಡಿಸಿಕೊಂಡು ಮುಂದಕ್ಕೆ ಹೆಜ್ಜೆ ಹಾಕಿದ್ದಾರೆ ಹಾಗೂ ಸುದೀರ್ಘಾವಧಿಯಲ್ಲಿ ಉತ್ತಮ ನಿರ್ವಹಣೆಯನ್ನೇ ತೋರಿದ್ದಾರೆ. ಹಾಗಾದರೆ ಯಶಸ್ವೀ ಹೂಡಿಕೆದಾರರು ಮತ್ತು ಸರಾಸರಿ ಈಕ್ವಿಟಿ ಫಂಡ್ ಹೂಡಿಕೆದಾರರ ನಡುವೆ ಇರುವ ವ್ಯತ್ಯಾಸವಾದರೂ ಏನು?

ಸರಾಸರಿ ಹೂಡಿಕೆದಾರರಿಗೆ ಹೋಲಿಸಿದರೆ ಈ ಯಶಸ್ವೀ ಹೂಡಿಕೆದಾರರು ಕೆಲವು ವಿಶಿಷ್ಟ ಗುಣಗಳನ್ನು ಹೊಂದಿರುತ್ತಾರೆ. ಅವರು ಹೆಚ್ಚು ವಿವೇಚನಯುತವಾಗಿ ಯೋಚಿಸುತ್ತಾರೆ. ಅವರು ತಮ್ಮ ವೈಯಕ್ತಿಕ ಪೂರ್ವಗ್ರಹಗಳು ಹೂಡಿಕೆಗಳ ಮೇಲೆ ಪರಿಣಾಮ ಬೀರದಂತೆ ಎಚ್ಚರಿಕೆಯನ್ನು ವಹಿಸುತ್ತಾರೆ. ಅವರು ಹೂಡಿಕೆ ವಿಚಾರದಲ್ಲಿ ಹೆಚ್ಚು ತಾಳ್ಮೆಯನ್ನು ಕಾಯ್ದುಕೊಳ್ಳುತ್ತಾರೆ. ತಾವು ಕೈಗೊಳ್ಳುವ ನಿರ್ಧಾರಗಳ ಮೇಲೆ ಭಾವನೆಗಳು ಪರಿಣಾಮ ಬೀರದಂತೆ ಎಚ್ಚರಿಕೆ ವಹಿಸುತ್ತಾರೆ. ಹಣಕ್ಕಿಂತ ಹೆಚ್ಚಾಗಿ ಸಂಪತ್ತು ಸೃಷ್ಟಿಯ ಪಯಣದ ಮೇಲೆ ಹೆಚ್ಚು ಗಮನವನ್ನು ನೀಡುತ್ತಾರೆ. ಅವರು ಸಂಶೋಧನೆ, ಅಧ್ಯಯನ ಮತ್ತು ದತ್ತಾಂಶ ಆಧಾರಿತ ವಿಷಯಗಳಿಗೆ ಆದ್ಯತೆಯನ್ನು ಕೊಡುತ್ತಾರೆ. ಜೊತೆಗೆ ಬೃಹತ್ತಾದ ಮತ್ತು ಸುದೀರ್ಘ ಅವಧಿಯ ಚಿತ್ರ ಅವರ ಮನಸ್ಸಿನಲ್ಲಿರುತ್ತದೆ. ಸಾಮಾನ್ಯ ಹೂಡಿಕೆದಾರರಿಗೆ ಇದನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೇ ಇರಬಹುದು. ಆದರೆ ಇದರಿಂದ ನಾವು ಕಲಿತುಕೊಳ್ಳಲು ಬೇಕಾದ ಸಾಕಷ್ಟು ಅಂಶಗಳಿವೆ. ನಮ್ಮ ಹೂಡಿಕೆ ಪಯಣದಲ್ಲಿ ಇಲ್ಲಿನ ಪ್ರತಿಯೊಂದು ಅಂಶವನ್ನೂ ಗಹನವಾಗಿ ಪರಿಗಣಿಸಬೇಕಾದ ಅಗತ್ಯವಿದೆ.

## ಮ್ಯುಚ್ಯುಯಲ್ ಫಂಡ್ ವಿತರಕರು/ಹೂಡಿಕೆ ಸಲಹೆಗಾರರ ನಿಜವಾದ ಪಾತ್ರ:

ಹೂಡಿಕೆಯ ವಿಚಾರದಲ್ಲಿ ಒಂದು ಆಸಕ್ತಿಯ ಸಂಗತಿಯಿದೆ ಎಂಬುದನ್ನು ಗಮನಿಸಬೇಕು. ಅನುಭವೀ ಮ್ಯುಚ್ಯುಯಲ್ ಫಂಡ್ (ಎಂಎಫ್)ವಿತರಕರು ಅಥವಾ ಹೂಡಿಕೆ ಸಲಹೆಗಾರರಂತಹ ತಜ್ಞರಿಂದ ಮಾರ್ಗದರ್ಶನವನ್ನು ಪಡೆದ ಹೂಡಿಕೆದಾರರು ಸರಾಸರಿ ಹೂಡಿಕೆದಾರರಿಗಿಂತ ಉತ್ತಮ ನಿರ್ವಹಣೆ ತೋರಿರುವುದು ಕಂಡುಬರುತ್ತದೆ. ನಿಮ್ಮ ಎಂಎಫ್ ವಿತರಕರ ನಿಜವಾದ ಪಾತ್ರ ನಿಮಗೆ ಬೇಕಾದ ಅತ್ಯುತ್ತಮ ನಿರ್ವಹಣೆಯ ಫಂಡ್ ಅಥವಾ ಸೇವೆಗಳನ್ನು ಕಂಡುಕೊಳ್ಳುವುದಲ್ಲ. ಬದಲಾಗಿ ಒಬ್ಬ ಹೂಡಿಕೆದಾರನ ನಡವಳಿಕೆಯನ್ನು ನಿಭಾಯಿಸುವುದು. ಅಗತ್ಯವೆನಿಸಿದರೆ ಅದನ್ನು ನಿಯಂತ್ರಿಸುವುದು. ನಿಮ್ಮ

ಹೂಡಿಕೆ ನಿರ್ಧಾರಗಳ ಮೇಲೆ ವೈಯಕ್ತಿಕ ಪೂರ್ವಗ್ರಹಗಳು, ಭಾವನೆಗಳು, ತಪ್ಪು ಮಾಹಿತಿ, ಜ್ಞಾನದ ಕೊರತೆಯಂತಹ ಅಂಶಗಳು ಪರಿಣಾಮ ಬೀರದಂತೆ ಖಾತರಿವಹಿಸುವುದು. ನೀವು ಇನ್ನಷ್ಟು ಉಳಿತಾಯ ಮತ್ತು ಹೂಡಿಕೆ ಮಾಡುವಂತೆ ಮುತುವರ್ಜಿವಹಿಸುವಂತೆ, ಮಾರುಕಟ್ಟೆಯಲ್ಲಿ ದೊಡ್ಡ ಚಿತ್ರಣವನ್ನು ನೋಡುವಂತೆ ನಿಮ್ಮನ್ನು ಪ್ರೇರೇಪಿಸುವುದರ ಜೊತೆ ಜೊತೆಗೇ ನಿಮ್ಮ ವಾದಗಳನ್ನು ಒಪ್ಪದಿರುವ, ನೀವು ಕಾಣದೇ ಇರುವ ದೊಡ್ಡ ಚಿತ್ರವನ್ನು ತೋರಿಸುವ ಹಾಗೂ ನಿಮಗೆ ಅತ್ಯಗತ್ಯವಾಗಿ ಬೇಕಾದ ಭರವಸೆಯನ್ನು ತುಂಬುವ ಕೆಲಸವನ್ನು ಅವರು ಮಾಡಬೇಕು. ಇದು ಎಂಎಫ್ ವಿತರಕರ ನಿಜವಾದ ಮತ್ತು ಮೌಲ್ಯಯುತ ಪಾತ್ರವಾಗಲಿದೆ. ಇದಕ್ಕೆ ತಕ್ಕುನಾದ ಬೆಲೆಯನ್ನು ಕಟ್ಟಲು ಅಥವಾ ನಿಮ್ಮ ಹಣಕಾಸು ಪಯಣಕ್ಕೆ ಅದು ನೀಡುವ ಮೌಲ್ಯದ ಪ್ರಮಾಣವನ್ನು ಅಳೆಯಲು ಸಾಧ್ಯವಿಲ್ಲ. ನಾವು ಎಂಎಫ್ ವಿತರಕರು/ಸಲಹೆಗಾರರ ಮಾರ್ಗದರ್ಶನವನ್ನು ಪಡೆದು ಅದನ್ನು ಅನುಸರಿಸಲು ಸಾಧ್ಯವಾದರೆ ಹೂಡಿಕೆದಾರರ ನಡವಳಿಕೆ ಸಂಬಂಧಿತ ಅಂತರವನ್ನು ಬೃಹತ್ ಪ್ರಮಾಣದಲ್ಲಿ ತುಂಬಲು ಸಾಧ್ಯವಿದೆ ಎನ್ನುವುದು ಮಾತ್ರ ನಿಜ. ಕೆಲವೇ ಕೆಲವು ಪ್ರಮಾಣದ ವ್ಯತ್ಯಾಸಗಳಿಗೆ ಸುದೀರ್ಘಾವಧಿಯಲ್ಲಿ ನಿಮ್ಮ ಬದುಕನ್ನೇ ಬದಲಿಸುವ ಸಾಮರ್ಥ್ಯವಿದೆ.

**ಕೊನೆಯ ಮಾತು:** ಈಕ್ವಿಟಿ ಮಾರುಕಟ್ಟೆಯಲ್ಲಿ ಐತಿಹಾಸಿಕ ನಿರ್ವಹಣೆ ಕಂಡುಬಂದಾಗ ನಾವು ಗಳಿಸಬಹುದಾದಷ್ಟು ಸಂಪತ್ತನ್ನು ಸೃಷ್ಟಿಸಲು ನಮ್ಮಿಂದ ಸಾಧ್ಯವಾಗಲಿಲ್ಲ ಎಂಬ ಭಾವನೆ ಕಾಡುತ್ತಿರುತ್ತದೆ. ಅದಕ್ಕೆ ನಡವಳಿಕೆ ಸಂಬಂಧಿ ಅಂತರವೇ ಕಾರಣ. ಮಾರುಕಟ್ಟೆಯ ಅಥವಾ ಉತ್ಪನ್ನ/ಫಂಡ್ ಆಯ್ಕೆಯ ಸಮಯಕ್ಕಿಂತ ಹೆಚ್ಚಾಗಿ ಒಟ್ಟಾರೆ ಬಂಡವಾಳ ಪಟ್ಟಿಯಲ್ಲಿ ಹೇಗೆ ನಿರ್ಧಾರವನ್ನು ಕೈಗೊಂಡೆವು ಮತ್ತು ವರ್ತಿಸಿದೆವು ಎಂಬುದೇ ಹೆಚ್ಚು ಮಹತ್ವದ್ದಾಗಿರುತ್ತದೆ. ಇಂತಹ ಅಂಶಗಳಿಗೆ ಮಾನ್ಯತೆಯನ್ನು ನೀಡುವುದಕ್ಕೆ ಇದು ಸಕಾಲ. ಈ ಹಿನ್ನೆಲೆಯಲ್ಲಿ ನಮ್ಮೊಳಗೇ ನಾವು ಗಮನವನ್ನು ಹರಿಸಿ ಸಮಯ, ಜ್ಞಾನ ಮತ್ತು ಅನುಭವದೊಂದಿಗೆ ಉತ್ತಮ ಹೂಡಿಕೆದಾರರಾಗಲು ದಾರಿಯನ್ನು ಕಂಡುಕೊಳ್ಳಬೇಕು. ನಮ್ಮ ಈ ಹಣಕಾಸು ಪಯಣದಲ್ಲಿ ನಮ್ಮ ಎಂಎಫ್ ವಿತರಕರು/ಸಲಹೆಗಾರರು ಬೆಂಬಲ ಮತ್ತು ಮಾರ್ಗದರ್ಶನ ನೀಡುವುದು ಮಾತ್ರ ನಿಶ್ಚಿತ. ಅಗತ್ಯವಿರುವುದು ಏನೆಂದರೆ ನಾವು ಅವರ ಮಾತುಗಳಿಗೆ ಹೆಚ್ಚು ಹೆಚ್ಚು ಕಿವಿಯಾಗುವುದು ಮತ್ತು ಅದರಂತೆ ನಿರ್ಧಾರಗಳು ಹಾಗೂ ಕ್ರಮಗಳನ್ನು ಕೈಗೊಳ್ಳುವುದು. ಇದರಿಂದಾಗಿ ಗಹನವಾದ, ಅರ್ಥಪೂರ್ಣವಾದ ಸಂವಹನ, ಸಮಾಲೋಚನೆಗಳು ನಡೆಯಲಿ ಎಂಬುದೇ ಆಶಯ.

**ಹಣಕಾಸು ಯೋಗಕ್ಷೇಮದ ಮಹತ್ವದ ಸ್ತಂಭಗಳಲ್ಲಿ ಒಂದೆಂದರೆ ಹಣಕಾಸಿನ ಸೂಕ್ತವಾದ ಯೋಜನೆ. ಹಣಕಾಸು ಯೋಗಕ್ಷೇಮದ ಸರಳ ಸೂತ್ರವೇನೆಂದರೆ ನಿಮ್ಮ ಅಗತ್ಯಕ್ಕಿಂತ ಹೆಚ್ಚಿನದನ್ನು ಪಡೆದಿರುವುದು ಹಾಗೂ ಹೆಚ್ಚಿನ ಮೊತ್ತವನ್ನು ಉತ್ತಮ ಭವಿಷ್ಯಕ್ಕಾಗಿ ಹೂಡಿಕೆ ಮಾಡುವುದು.**




# ಸಪ್ತ ಸೂತ್ರಗಳು

ಮನುಷ್ಯರಾದ ನಮಗೆಲ್ಲರಿಗೂ ಕನಸು, ಮಹತ್ವಾಕಾಂಕ್ಷೆಗಳಿರುತ್ತವೆ. ಅದರಲ್ಲೂ ನಾವು ಯುವಕರಾಗಿದ್ದಾಗ ಇದು ಅಪಾರವಾಗಿರುತ್ತದೆ. ಅವಧಿಪೂರ್ವ ನಿವೃತ್ತಿ ಇರಲಿ ಅಥವಾ ಅರಮನೆಯಂತಹ ಐಷಾರಾಮಿ ಮನೆ ಅಥವಾ ಐಷಾರಾಮಿ ಕಾರು ಇರಲಿ. ಕನಸುಗಳ ಸಾಲು ಮುಂದುವರಿದಿರುತ್ತದೆ. ದುರಾದೃಷ್ಟದ ಸಂಗತಿ ಎಂದರೆ ನಮ್ಮಲ್ಲಿ ಅನೇಕರಿಗೆ ಈ ಕನಸುಗಳು ಕೈಗೆಟುಕದಷ್ಟು ಎತ್ತರದಲ್ಲಿರುತ್ತವೆ. ಹಾಗಾಗಿ ಇಂತಹ ಬೃಹತ್ ಯೋಚನೆಗಳನ್ನು ಕೈಬಿಟ್ಟು ವಾಸ್ತವಕ್ಕೆ ಹತ್ತಿರವಾಗಿರಲು ಪ್ರಯತ್ನಿಸುತ್ತೇವೆ. ಕನಸುಗಳು ಕೈಗೆಟುವವರೆಗೆ ಕಾಯುತ್ತೇವೆ. ಆ ಹೊತ್ತಿಗೆ ವಯಸ್ಸೂ ಆಗಿರುತ್ತದೆ. ಇಂತಹ ಮನಸ್ಥಿತಿಯನ್ನು ಬದಲಿಸಲು ಸಾಧ್ಯವಿಲ್ಲವೇ? ಅದಕ್ಕೆ ಎರಡು ದಾರಿಗಳಿವೆ. ಮೊದಲನೆಯದಾಗಿ ಸಾಕಷ್ಟು ಹಣವನ್ನು ಸಂಪಾದಿಸುವುದು; ಇದು ಪ್ರತಿಯೊಬ್ಬರಿಗೂ ಸಾಧ್ಯವಾಗದೆ ಇರಬಹುದು. ಎರಡನೆಯದಾಗಿ ಉಳಿತಾಯ ಮಾಡುವ ಮತ್ತು ಹೂಡಿಕೆ ಮಾಡುವ ಸುದೀರ್ಘವಾದ ಮತ್ತು ಸುಲಭವಾದ ದಾರಿಯಲ್ಲಿ ನಡೆಯುವುದು.

ಹಣಕಾಸು ಯೋಗಕ್ಷೇಮದ ಮಹತ್ವದ ಸ್ತಂಭಗಳಲ್ಲಿ ಒಂದೆಂದರೆ ಹಣಕಾಸಿನ ಸೂಕ್ತವಾದ ಯೋಜನೆ. ಹಣಕಾಸು ಯೋಗಕ್ಷೇಮದ ಸರಳ ಸೂತ್ರವೇನೆಂದರೆ ನಿಮ್ಮ ಅಗತ್ಯಕ್ಕಿಂತ ಹೆಚ್ಚಿನದನ್ನು ಪಡೆದಿರುವುದು ಹಾಗೂ ಹೆಚ್ಚಿನ ಮೊತ್ತವನ್ನು ಉತ್ತಮ ಭವಿಷ್ಯಕ್ಕಾಗಿ ಹೂಡಿಕೆ ಮಾಡುವುದು. ಸಾಮಾನ್ಯವಾಗಿ ನಾವು ಸಂಪತ್ತು ಸೃಷ್ಟಿಯನ್ನು ಅಗತ್ಯಕ್ಕಿಂತ ಹೆಚ್ಚು ಸಂಕೀರ್ಣಗೊಳಿಸುತ್ತೇವೆ. ಈಗಲೂ ದೊಡ್ಡ ದೊಡ್ಡ ಕನಸುಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ಹೊಂದಿದ ಜನರು ಇದ್ದಾರೆ. ಆದರೆ ಅವರು ಸಂಪತ್ತು ಸೃಷ್ಟಿಯ ವಿಚಾರದಲ್ಲಿ ಕಟ್ಟುನಿಟ್ಟಾದ ಮತ್ತು ಬದುಕು ಬದಲಿಸುವ ನಿಯಮಗಳನ್ನು ಪಾಲಿಸುವುದಿಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ನಾವು ಈ ಲೇಖನದಲ್ಲಿ ಸಂಪತ್ತು ಸೃಷ್ಟಿಯ ಏಳು ನಿಯಮಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ.

### 1. ಸಮಯ ಅತ್ಯಮೂಲ್ಯ:

ಯಾವುದೇ ಕೆಲಸವನ್ನು ಎಷ್ಟು ಬೇಗ ಆರಂಭ ಮಾಡುತ್ತೀರೋ ಅಷ್ಟು ಒಳ್ಳೆಯದು. ಅಂದರೆ ನೀವು ಹೂಡಿಕೆಯನ್ನು ಆರಂಭಿಸಲು ಅತ್ಯುತ್ತಮವಾದ ಸಮಯವೆಂದರೆ ನಿಮಗೆ ಸಂಬಳದ ಮೊದಲ ಚೆಕ್ ಬಂದ

ದಿನದಿಂದಲೇ. ಇನ್ನೊಂದು ಅತ್ಯುತ್ತಮವಾದ ಸಮಯವೆಂದರೆ ಅದು ಇಂದಲ್ಲ, ನಿನ್ನೆಯೇ. ನೀವು ಸಂಪತ್ತು ಸೃಷ್ಟಿಯ ವಿಚಾರದಲ್ಲಿ ನಿಜಕ್ಕೂ ಗಂಭೀರವಾಗಿದ್ದರೆ ನಾಳೆ ಎಂಬುದಿಲ್ಲ, ನಾಳೆ ಮಾಡಬೇಕಾದುದನ್ನು ಇಂದೇ ಮಾಡಿರಬೇಕು. ಸಮಯದ ಶಕ್ತಿ ಮತ್ತು ಮಹತ್ವ ಎಷ್ಟು ಎಂಬುದು ನಮಗೆಲ್ಲರಿಗೂ ಗೊತ್ತೇ ಇದೆ. ಅದನ್ನು ಅರ್ಥ ಮಾಡಿಕೊಂಡರೆ ಮತ್ತು ಅದನ್ನು ಕ್ರೋಢೀಕರಿಸಿದರೆ ನಿಜಕ್ಕೂ ಅಚ್ಚರಿಯನ್ನು ಸೃಷ್ಟಿಸಬಹುದು. ಹಾಗಂತ ನೀವು ಸಾಧ್ಯವಾದಷ್ಟು ಬೇಗ ಆರಂಭಿಸದೇ ಹೋದರೆ ಅಚ್ಚರಿಯ ಅನಾವರಣ ಕೂಡ ವಿಳಂಬವಾಗುತ್ತ ಹೋಗುತ್ತದೆ. ಅದಕ್ಕಾಗಿ ಸಮಯವನ್ನು ನಮ್ಮದಾಗಿಸಿಕೊಳ್ಳಬೇಕು, ಕಳೆದು ಹೋದ ಸಮಯದ ಹೊಂದಾಣಿಕೆ ಮಾಡಿಕೊಳ್ಳಲು ಎರಡು ಪಟ್ಟು ಕಠಿಣ ಪರಿಶ್ರಮಪಡಬೇಕಾಗುತ್ತದೆ.




### 2. ಉಳಿತಾಯದಲ್ಲಿ ಆಕ್ರಮಣಶೀಲತೆ:

ಐದು ವರ್ಷದ ಮಗುವಿಗೆ ಒಂದು ಐಸ್ ಕ್ರೀಮ್ ಕೊಟ್ಟು ಇದನ್ನು ಈಗ ತಿನ್ನುತ್ತಿಯಾ ಅಥವಾ ಇದನ್ನು ಹಿಂದಕ್ಕೆ ಕೊಟ್ಟು ಮುಂದಿನ ಎರಡು ತಿಂಗಳ ಬಳಿಕ ತಿನ್ನುತ್ತಿಯಾ ಎಂದು ಕೇಳಿ. ಆಗ ಆಕೆ ಏನು ಮಾಡುತ್ತಾಳೆ? ಸಾಮಾನ್ಯವಾಗಿ ತಕ್ಷಣ ಆಯ್ಕೆ ಮತ್ತು ವಿಳಂಬಿತ ತೃಪ್ತಿಯ ವಿಷಯ ಬಂದಾಗ ನಾವು ಐದು ವರ್ಷ ವಯಸ್ಸಿನ ಮಗುವಿಗಿಂತ ಭಿನ್ನವಾಗೇನೂ ವರ್ತಿಸುವುದಿಲ್ಲ. ಐಷಾರಾಮಿ ಮತ್ತು ಸಿರಿವಂತಿಕೆಯ ವಿಚಾರದಲ್ಲಿ ಖರ್ಚು ಮಾಡುವುದಕ್ಕೆ ಬದಲಾಗಿ ನಮ್ಮನ್ನು ನಾವು ಮೇಲ್ದರ್ಜೆಗೆ ಏರಿಸಿಕೊಳ್ಳಲು, ಹೊಸತನ್ನು ಕಲಿಯಲು, ಪರ್ಯಾಯವಾಗಿ ಇನ್ನೊಂದು ಉದ್ಯಮವನ್ನು ಆರಂಭಿಸಲು ಮತ್ತು ಹಣದ ಉಳಿತಾಯ ಮಾಡಿ ಏರಿಕೆ ಕಾಣುವ ಆಸ್ತಿಗಳಲ್ಲಿ ಹೂಡಿಕೆಯನ್ನು ಮಾಡುವುದು ಉತ್ತಮ ಆಯ್ಕೆಯಾಗುತ್ತದೆ. ನೀವು ಇಂದು ಗಳಿಕೆ ವಿಚಾರದಲ್ಲಿ ಹೆಚ್ಚು ಗಂಭೀರವಾಗಿದ್ದು ಆಕ್ರಮಣಶೀಲತೆಯನ್ನು ಮೈಗೂಡಿಸಿಕೊಂಡಿದ್ದರೆ ನಿಮ್ಮ ಹಣಕಾಸು ಪಯಣವನ್ನು ಹೆಚ್ಚು ಉತ್ತಮವಾಗಿ ಅನುಭವಿಸಲು ಹಾಗೂ ಬಹಳ ಬೇಗ ನಿಮ್ಮ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ.

### 3. ಆಸ್ತಿ ಹಂಚಿಕೆಯೇ ಮುಖ್ಯ:

ಕೆಲವೊಮ್ಮೆ ನಾವು ಮರಗಳಿಗಾಗಿ ಅರಣ್ಯವನ್ನು ನೋಡುವುದಿಲ್ಲ. ಕಣ್ಣ ಮುಂದೆ ಇರುವ ದೊಡ್ಡ ಚಿತ್ರದ ಕಡೆಗೆ ನಮ್ಮ ದೃಷ್ಟಿ ಸೆಳೆಯುವುದಿಲ್ಲ. ಯಾವ ಫಂಡ್ ಉತ್ತಮ ನಿರ್ವಹಣೆಯನ್ನು ತೋರುತ್ತದೆ, ಮುಂದಿನ ಬಹುಲಾಭದ ಫಂಡ್ ಯಾವುದು, ನನ್ನ ಫಂಡ್ ಹೇಗೆ ನಿರ್ವಹಣೆ ತೋರುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಹೆಚ್ಚು ಸಮಯವನ್ನು ನಾವು ವ್ಯಯಿಸುತ್ತೇವೆ. ಅಷ್ಟಕ್ಕೂ ನಿಮ್ಮ ಬಂಡವಾಳ ಪಟ್ಟಿಯಲ್ಲಿ ಕೇವಲ ಕೆಲವೇ ಕೆಲವು ಭಾಗ ನಿಮ್ಮ ಫಂಡ್ ಇರುವಾಗ ಅದರ ನಿರ್ವಹಣೆ ಉತ್ತಮವಿದೆಯೋ ಇಲ್ಲವೋ ಎಂಬುದು ಎಷ್ಟರ ಮಟ್ಟಿಗೆ ಪರಿಣಾಮವನ್ನು ಬೀರಲು ಸಾಧ್ಯ? ಹಾಗಾದರೆ ನಾವು ನಿಜಕ್ಕೂ ಬೃಹತ್ ಚಿತ್ರವನ್ನು ನೋಡಿಲ್ಲವೇ?

ಭಾರತದಲ್ಲಿರುವ ಪ್ರತಿ ಮನೆಯೂ ಈಗ ರಿಯಲ್ ಎಸ್ಟೇಟ್ ಮತ್ತು ಚಿನ್ನದ ಕಡೆಗೆ ಹೆಚ್ಚು ಒಲವನ್ನು ಹೊಂದಿದೆ. ಇಡೀ ಸಂಪತ್ತಿನಲ್ಲಿ ಅರ್ಧದಷ್ಟು ಇದರ ಪಾಲೇ ಇರುತ್ತದೆ. ಉಳಿದ ಅರ್ಧ ಹಣಕಾಸು ಸಂಬಂಧಿ ಆಸ್ತಿಗಳಿರುತ್ತವೆ. ಅಂದರೆ ಬ್ಯಾಂಕ್ ಠೇವಣಿಗಳು, ಸರ್ಕಾರಿ ಸಣ್ಣ ಉಳಿತಾಯ ಯೋಜನೆಗಳು, ವಿಮಾ ಹೂಡಿಕೆಗಳು ಇತ್ಯಾದಿ. ಅತ್ಯಂತ ಕಡಿಮೆ ಆದ್ಯತೆ ಇರುವುದು ಈಕ್ವಿಟಿ ಮತ್ತು ಮ್ಯುಚ್ಯುಯಲ್ ಫಂಡ್‌ಗಳ ಮೇಲೆ. ಇವೆರಡೂ ಸುದೀರ್ಘಾವಧಿಯಲ್ಲಿ ಅಪಾರವಾದ ಸಂಪತ್ತನ್ನು ಸೃಷ್ಟಿಸುವ ವಿಚಾರದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಇಲ್ಲಿ ನಾವು ಸಲಹೆ ಮಾಡುತ್ತಿರುವುದು ಏನೆಂದರೆ ಪ್ರತಿಯೊಬ್ಬರೂ ಕೂಡ ಅತ್ಯಂತ ಸಮತೋಲಿತವಾದ ಬಂಡವಾಳ ಪಟ್ಟಿಯನ್ನು ಹೊಂದಿರಬೇಕು; ಅದರಲ್ಲಿ ಈಕ್ವಿಟಿ ಆಸ್ತಿ ವರ್ಗಕ್ಕೆ ಸರಿಯಾದ ಪ್ರಾಶಸ್ತ್ಯವನ್ನು ನೀಡಬೇಕು. ಇದನ್ನು ಕಾಲಕಾಲಕ್ಕೆ ಪರಿಶೀಲಿಸಬೇಕು ಮತ್ತು ಬಂಡವಾಳ ಪಟ್ಟಿಯನ್ನು ಮರುಸಮತೋಲನಕ್ಕೆ ಒಳಪಡಿಸಬೇಕು.

### 4. ಭಾವನೆಗಳಿಗಿರಲಿ ಕಡಿವಾಣ:

ಈಕ್ವಿಟಿ ಮಾರುಕಟ್ಟೆಗಳು ಸುದೀರ್ಘಾವಧಿಯಲ್ಲಿ ಅತ್ಯಂತ ಆಕರ್ಷಕ ಆದಾಯವನ್ನು ನೀಡುವ ಮೂಲಕ ಇತರ ಆಸ್ತಿ ವರ್ಗಗಳನ್ನು ಹಿಂದಿಕ್ಕಿವೆ ಎಂಬುದು ಅನೇಕ ಅಧ್ಯಯನಗಳಿಂದ ವ್ಯಕ್ತವಾಗಿದೆ. ಎಲ್ಲ ಯುದ್ಧ, ಘಟನೆಗಳು, ಬಿಕ್ಕಟ್ಟು, ಪ್ಯಾಂಡಮಿಕ್‌ಗಳು ಇದ್ದರೂ ಕೂಡ ಇದರ ನಿರ್ವಹಣೆಯಲ್ಲಿ ಯಾವುದೇ ಕೊರತೆ ಉಂಟಾಗದೇ ಇರುವುದನ್ನು ಗಮನಿಸಬಹುದು. ಇಂತಹ ಪರಿಸ್ಥಿತಿಯಲ್ಲಿ ಭಯ ಆತಂಕಕ್ಕೆ ಒಳಗಾದ ಬಹುತೇಕ ಹೂಡಿಕೆದಾರರು ವಿಫಲರಾಗಿದ್ದಾರೆ. ವಾರೆನ್ ಬಫೆಟ್ ಅವರು ಹೇಳಿದ ಒಂದು ಮಾತು ಇಲ್ಲಿ ಹೆಚ್ಚು ಔಚಿತ್ಯಪೂರ್ಣ ಅನಿಸುತ್ತದೆ; "ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸದೇ ಹೋದರೆ ನೀವು ನಿಮ್ಮ ಹಣವನ್ನು ಕೂಡ ನಿಯಂತ್ರಿಸಲು ಸಾಧ್ಯವಿಲ್ಲ" ನಮ್ಮ ಭಾವನೆಗಳು ಹಾಗೂ ನಮ್ಮ ನಡವಳಿಕೆ ಸಂಬಂಧಿ ಪೂರ್ವಗ್ರಹಗಳು ನಮ್ಮ ನಿರ್ಧಾರಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ನಾವು ವಿವೇಚನಾಯುತವಾಗಿ ಕಾರ್ಯಪ್ರವೃತ್ತರಾಗುವ ಬದಲಿಗೆ ಮತ್ತು ಜನಜಂಗುಳಿಯ ಮನಸ್ಥಿತಿಗೆ ವಿರುದ್ಧವಾಗಿ ವರ್ತಿಸುವ ಬದಲಿಗೆ ಅದೇ ಮಂದೆಯಲಿ ಒಂದಾಗಿ ಬಿಡುತ್ತೇವೆ. ನಾವು ಮಾರುಕಟ್ಟೆಯನ್ನು ಪ್ರವೇಶಿಸಿದಾಗ ಕಾಲ ಮೀರಿರುತ್ತದೆ, ಹಾಗಾಗಿ ಆದಷ್ಟು ಬೇಗ ನಿರ್ಗಮಿಸುವುದು ಅನಿವಾರ್ಯವಾಗುತ್ತದೆ. ನಮ್ಮ ಸುತ್ತಮುತ್ತ ಇರುವ ಎಲ್ಲ ಸದ್ದು–ಗದ್ದಲಗಳು ಮತ್ತು ಸುಲಭವಾಗಿ ಲಭ್ಯವಿರುವ ಮಾಹಿತಿಗಳ ನಡುವೆ ನಾವು ಮಾರುಕಟ್ಟೆಯನ್ನು ನಿಭಾಯಿಸಲು ಮತ್ತು ಚತುರ ನಿರ್ಧಾರಗಳನ್ನು ಕೈಗೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ. ಯಾವುದೇ ಮೊಬೈಲ್ ನೆಟ್‌ವರ್ಕ್ ಕೂಡ ಇಲ್ಲದೇ ಒಂದು ದ್ವೀಪದಲ್ಲಿ ಸಿಕ್ಕಿಹಾಕಿಕೊಳ್ಳುವುದು ಕೂಡ ಹಣಕಾಸು ದೃಷ್ಟಿಯಿಂದ ಲಾಭದಾಯಕವೇ ಆಗಿದೆ. ನೆನಪಿಡಿ; ಏನನ್ನು ಮಾಡಲು ನಿರಾಕರಿಸುವುದು ಕೂಡ ಏನನ್ನಾದರೂ ಮಾಡಿದಂತೆ!

### 5. ಬಂಡವಾಳದ ವೈವಿಧ್ಯತೆಯೂ ಇರಲಿ ಮಿತಿಯಲ್ಲಿ:

ಬಂಡವಾಳದಲ್ಲಿ ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದು ನಮ್ಮ ಬಂಡವಾಳ ಪಟ್ಟಿಯ ಮೇಲಿನ ಒಟ್ಟಾರೆ ಅಪಾಯವನ್ನು ತಗ್ಗಿಸುತ್ತದೆ. ಎಲ್ಲ ಆಸ್ತಿಗಳು ಏಕಕಾಲದಲ್ಲಿ ಒಂದೇ ರೀತಿಯ ವರ್ತನೆಯನ್ನು ಹೊಂದಿರುವುದಿಲ್ಲ, ಅವು ನಾನಾ ರೀತಿಯ ಅಪಾಯ ಮತ್ತು ಆದಾಯದ ಅಂಶಗಳನ್ನು ಹೊಂದಿರುತ್ತವೆ. ವಿಶಾಲ ಮಟ್ಟದಲ್ಲಿ ಬಂಡವಾಳದ ವೈವಿಧ್ಯೀಕರಣ ಯಾಕೆ ಅಗತ್ಯವಿದೆ ಎಂದರೆ ಆಸ್ತಿ ಹಂಚಿಕೆ ಪ್ರಕ್ರಿಯೆಯನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತದೆ. ನಿರ್ದಿಷ್ಟ ಕಾರ್ಯತಂತ್ರದ ಪ್ರಕಾರ ಇದನ್ನು ಕಾಲಕಾಲಕ್ಕೆ ಮಾಡುವುದು ಸೂಕ್ತ. ಹಾಗಂತ ಅನೇಕ ಆಸ್ತಿ ವರ್ಗಗಳಲ್ಲಿ ಮಿತಿ ಮೀರಿದ ವೈವಿಧ್ಯೀಕರಣ ಕೂಡ ಸರಿಯಲ್ಲ. ಇದರಿಂದ ಅನೇಕ ಕಳಪೆ ನಿರ್ವಹಣೆಯ ಆಸ್ತಿಗಳು ನಿಮ್ಮ ಬಂಡವಾಳ ಪಟ್ಟಿಯಲ್ಲಿ ಇಣುಕು ಹಾಕಬಹುದು. ಉದಾಹರಣೆಗೆ ರೇಸ್‌ನಲ್ಲಿರುವ ಎಲ್ಲ ಕುದುರೆಯ ಮೇಲೆ ಹಣ ಹಾಕಲು ಸಾಧ್ಯವಿಲ್ಲ.

ಕೆಲವು ತಜ್ಞರು ನೀಡುವ ಸಲಹೆ ಏನೆಂದರೆ, ನೀವು ಏನು ಮಾಡುತ್ತಿದ್ದೀರಿ ಎಂಬುದು ನಿಮಗೇ ಗೊತ್ತಿಲ್ಲದೆ ಹೋದರೆ ಬಂಡವಾಳದ ವೈವಿಧ್ಯೀಕರಣ ಅತ್ಯಂತ ಅಗತ್ಯ. ಇದು ಸಂಪೂರ್ಣವಾಗಿ ಸಮತೋಲನವನ್ನು ಕಾಯ್ದುಕೊಳ್ಳುವ ವಿಚಾರವಾಗಿದೆ. ಇದರಲ್ಲಿ ಕೆಲವು ಮಹತ್ವದ ಸಂಗತಿಗಳು ಮಿಳಿತವಾಗಿರಬೇಕು. ಕೆಲವರು ಈಕ್ವಿಟಿ, ಡೆಟ್ ಮತ್ತು ಸ್ಥಿರ ಆಸ್ತಿ ವರ್ಗಗಳನ್ನು ಮತ್ತು ಹಣಕಾಸು ಉತ್ಪನ್ನಗಳು/ಸೆಕ್ಯುರಿಟಿಗಳನ್ನು ಕೂಡ ಆಯ್ಕೆ ಮಾಡಿಕೊಳ್ಳಬಹುದು. ಇದರಲ್ಲಿಯೂ ಫಂಡ್ ವಿಭಾಗಗಳು, ಎಎಂಸಿ, ಮಾರ್ಕೆಟ್–ಕ್ಯಾಪ್‌ನಂತಹ ಸೀಮಿತ ವೈವಿಧ್ಯೀಕರಣಕ್ಕೆ ಅವಕಾಶವಿರುತ್ತದೆ. ಈ ಉತ್ಪನ್ನಗಳಲ್ಲಿ ಅವಧಿ/ಮೆಚ್ಯುರಿಟಿಯ ಸಮಯ, ಮಾನದಂಡಗಳು ಮುಖ್ಯವಾಗುತ್ತವೆ.

### 6. ಸಂಪತ್ತಿನ ಸಂರಕ್ಷಣೆ ಮರೆಯದಿರಿ:

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎನ್ನುವ

ಗಾದೆ ಮಾತಿನ ಹಾಗೆ ನೀವು ಕೂಡಿಟ್ಟ ಅಷ್ಟೂ ಸಂಪತ್ತನ್ನು ಒಂದು ದುರದೃಷ್ಟಕರ ಕ್ಷಣ ಮತ್ತು ಘಟನೆಯಿಂದ ಕಳೆದುಬಿಡಬಹುದು. ನಮ್ಮ ಸುತ್ತಮುತ್ತ ಇಂತಹ ಅನೇಕ ಘಟನೆಗಳಿಗೆ ನಾವು ಸಾಕ್ಷಿಯಾಗಿರುತ್ತೇವೆ. ಒಂದು ದುರಂತ, ವ್ಯಾಪಾರದಲ್ಲಿನ ನಷ್ಟ, ಕೋರ್ಟ್ ಕೇಸ್‌ಗಳು, ಅಪರಾಧ, ಅಪಘಾತ ಇತ್ಯಾದಿ ಕಾರಣಗಳಿಂದಾಗಿ ಅನೇಕ ಕುಟುಂಬಗಳು ಜೀವನದ ಪ್ರಗತಿಯ ಹಾದಿಯಿಂದ ಬಹಳ ಹಿಂದಕ್ಕೆ ಹೋಗಿರುವ ಉದಾಹರಣೆಗಳಿವೆ. ನಾವು ಸಾಕಷ್ಟು ಎಚ್ಚರಿಕೆಯಿಂದ ಇದ್ದರೂ ಜೀವನದಲ್ಲಿ ನಡೆಯುವ ಕೆಲವು ಸಂಗತಿಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಆದರೆ, ಇಂತಹ ಎಲ್ಲ ಘಟನೆಗಳಿಂದ ಉಂಟಾಗುವ ಹಣಕಾಸು ಪ್ರತಿಕೂಲ ಪರಿಣಾಮಗಳು ನಮ್ಮ ಹಣಕಾಸು ಯೋಗಕ್ಷೇಮಗಳ ಜೊತೆ ರಾಜಿ ಮಾಡಿಕೊಳ್ಳದಂತೆ ನಿಶ್ಚಿತವಾಗಿ ನಿಯಂತ್ರಿಸಬಹುದು. ವಿಮಾ ಪಾಲಿಸಿಯನ್ನು ಹೊಂದುವುದರಿಂದ ನಿಮ್ಮ ಮೇಲೆ ಆಗಬಹುದಾದ ಹಣಕಾಸು ನಷ್ಟವನ್ನು ತಕ್ಕಮಟ್ಟಿಗೆ ಕಡಿಮೆಮಾಡಬಹುದು. ಜೊತೆಗೆ ನಿಮ್ಮನ್ನು ಹಣಕಾಸು ವಿಚಾರದಲ್ಲಿ ಸಂರಕ್ಷಣೆ ಮಾಡಬಹುದಾದ ಇನ್ನೂ ಅನೇಕ ಉತ್ಪನ್ನಗಳು ಇವೆ. ಇದಕ್ಕಾಗಿ ಜೀವನ, ಆರೋಗ್ಯ, ವೈಯಕ್ತಿಕ ಅಪಘಾತ, ತೀವ್ರ ಅಸ್ವಸ್ಥತೆ, ಗೃಹ, ಮೋಟರ್, ಅಗ್ನಿ, ಆಕಸ್ಮಿಕ, ಪ್ರಯಾಣ, ಅಂಗಡಿಯವನ ವೃತ್ತಿಪರ ನಷ್ಟಪರಿಹಾರ ಇತ್ಯಾದಿ ಕ್ರಮಗಳ ಮೂಲಕ ಹಣಕಾಸು ಸಂಕಷ್ಟವನ್ನು ತಗ್ಗಿಸಬಹುದಾಗಿದೆ. ಇಷ್ಟುಮಾತ್ರವಲ್ಲದೆ ಜೀವನದಲ್ಲಿ ಅನಗತ್ಯ ಅಪಾಯಗಳನ್ನು ಎದುರು ಹಾಕಿಕೊಳ್ಳದೇ ಇರುವುದು ಮತ್ತು ಭಾರೀ ಪ್ರಮಾಣದ ಬಾಜಿ ಕಟ್ಟದೆ ಇರುವುದರಿಂದ ಹಣಕಾಸು ಅಪಾಯವನ್ನು ತಗ್ಗಿಸಬಹುದು.

### 7. ಬಹು ಆದಾಯದ ಮೂಲಗಳಿರಲಿ:

ಸ್ವಪ್ರಯತ್ನದಿಂದ ಕೋಟ್ಯಧಿಪತಿಗಳಾದವರಲ್ಲಿ ಕಾಣುವ ಒಂದು ಸಮಾನ ಸಂಗತಿ ಏನೆಂದರೆ ಅವರು ತಮ್ಮನ್ನು ಮತ್ತು ತಮ್ಮ ವೃತ್ತಿಯನ್ನು ಗಂಭೀರವಾಗಿ ಪರಿಗಣಿಸಿರುತ್ತಾರೆ. ಅವರಿಗೆ ತಮ್ಮ ಜೀವನದಲ್ಲಿನ ಗುರಿಗಳ ಕಡೆಗೆ ಸ್ಪಷ್ಟತೆ ಇರುತ್ತದೆ. ಅದಕ್ಕೆ ತಕ್ಕುನಾದ ಉತ್ತಮ ಅಭ್ಯಾಸಗಳನ್ನು ಮತ್ತು ನಡವಳಿಕೆಗಳನ್ನು ಅವರು ರೂಢಿಸಿಕೊಂಡಿರುತ್ತಾರೆ. ಅವರು ತಮ್ಮ ಜಾಲವನ್ನು ಬೆಳೆಸಿಕೊಳ್ಳಲು ಬೇಕಾದ ಜನರನ್ನು ತಮ್ಮೊಂದಿಗೆ ಬೆಳೆಸುತ್ತಾರೆ, ತಮ್ಮ ಜ್ಞಾನ ಮತ್ತು ಕೌಶಲವನ್ನು ವೃದ್ಧಿಸಿಕೊಳ್ಳಲು ಬೇಕಾದ ಕ್ರಮವನ್ನು ಕೈಗೊಳ್ಳುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಅವರು ಒಂದು ಯೋಚನೆಗೆ ಪಕ್ಕಾಗಿದ್ದರೂ ಕೂಡ ಒಂದೇ ಒಂದು ಉತ್ಪನ್ನವನ್ನು ನಂಬಿಕೊಂಡಿರುವುದಿಲ್ಲ. ಆದಾಯದ ಬಹುಮೂಲಗಳನ್ನು ಆಶ್ರಯಿಸಿರುತ್ತಾರೆ. ವಿಷಯಗಳ ವೈವಿಧ್ಯತೆಯಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿರುತ್ತಾರೆ. ಅದಕ್ಕೆ ಬೇಕಾದಂತೆ ಅವರು ಹೊರಗುತ್ತಿಗೆ, ಪಾಲುದಾರಿಕೆಯಲ್ಲಿ ತೊಡಗಿಸಿಕೊಂಡು ಸಣ್ಣಸಣ್ಣ ಆದಾಯವು ಸ್ವಯಂಚಾಲಿತವಾಗಿ ಬರುವಂತೆ ವ್ಯವಸ್ಥೆ ಮಾಡಿಕೊಂಡಿರುವುದು ಕಾಣುತ್ತದೆ. ಅವರಿಗೆ ಹಣವೊಂದೇ ಗುರಿಯಾಗಿರುವುದಿಲ್ಲ ಒಟ್ಟಾರೆ ಹಣಕಾಸು ಪಯಣದ ಕಡೆಗೆ ಅವರು ಗಮನ ಹರಿಸಿರುತ್ತಾರೆ. ಅಂತಹ ಚಿತ್ರವನ್ನು ಚಿತ್ರಿಸಲು ನೀವು ಇಂದಿನಿಂದಲೇ ನಿಮ್ಮನ್ನು ನೀವು ರೂಪಿಸಿಕೊಳ್ಳುತ್ತ ಹೋಗಿ.



# ಹಣಕಾಸು ಸೌಖ್ಯದಲ್ಲಿ ವಿಮೆಯ ಪಾತ್ರ

ಇಂದಿನ ದಿನಮಾನಗಳಲ್ಲಿ ಅನಿಶ್ಚಿತತೆ ಎನ್ನುವುದು ಸರ್ವವ್ಯಾಪಿಯಾಗಿದೆ. ನಮ್ಮ ಸುತ್ತಮುತ್ತ ಇರುವ ಜಗತ್ತಿನಲ್ಲಿ ನಾವು ಇದನ್ನು ದಿನವೂ ಕಾಣುತ್ತಿದ್ದೇವೆ. ಮುಂದಿನ ದಿನ ಅಥವಾ ಗಂಟೆಗಳಲ್ಲಿ ಏನಾಗುತ್ತದೆ ಎಂಬ ಬಗ್ಗೆ ನಮಗೇ ಖಚಿತತೆ ಇಲ್ಲ. ಒಳಿತು ಕೆಡುಕು ಎರಡಕ್ಕೂ ನಾವು ಸಿದ್ಧರಾಗಿರಬೇಕು. ಒಂದು ದುರದೃಷ್ಟದ ಘಟನೆ ಇಡೀ ಕುಟುಂಬವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿಬಿಡಬಹುದು ಮತ್ತು ವರ್ಷಗಳಿಂದ ಸಂಪಾದಿಸಿದ ಹಣ ಕರಗಿ ಹೋಗಬಹುದು. ಇಂತಹ ಸಂದರ್ಭದಲ್ಲಿ ಹಣಕಾಸಿನ ಯೋಗಕ್ಷೇಮ ಸರಿಯಾಗಿಲ್ಲದೇ ಹೋದರೆ ಸಂಕಷ್ಟಕ್ಕೆ ಸಿಲುಕುವುದು ನಿಶ್ಚಿತ. ಹಾಗಾಗಿ ಕುಟುಂಬದ ಹಣಕಾಸು ಯೋಗಕ್ಷೇಮವನ್ನು ಕಾಯ್ದುಕೊಳ್ಳಲು ವಿಮೆ ಅತ್ಯಗತ್ಯ. ನೀವು ಮತ್ತು ನಿಮ್ಮ ಕುಟುಂಬಕ್ಕೆ ಸೂಕ್ತವಾದ ವಿಮಾ ಪಾಲಿಸಿಯನ್ನು ಖರೀದಿ ಮಾಡುವುದನ್ನು ಮರೆಯಬಾರದು. ಈ ಹಿನ್ನೆಲೆಯಲ್ಲಿ ನಿಮ್ಮ ಜೀವನ, ಆರೋಗ್ಯ ಮತ್ತು ಹಣಕಾಸಿನ ಜವಾಬ್ದಾರಿಯನ್ನು ಹೊಂದಿರುವ ಆಸ್ತಿಗೆ ಸಂಬಂಧಿಸಿದಂತೆ ಎಲ್ಲ ಅಪಾಯಗಳಿಗೆ ಹಣಕಾಸಿನ ಬೆಂಬಲವನ್ನು ಪಡೆಯಲು ತಕ್ಕುನಾದ ವಿಮಾ ಕವರೇಜ್‌ನ್ನು ಹೊಂದಿರಬೇಕು.

ಈ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಕೆಲವು ಉದಾಹರಣೆಗಳನ್ನು ಗಮನಿಸೋಣ:

- ಇನ್ನೂ ಹದಿಹರಯದಲ್ಲಿ ಇರುವಾಗಲೇ ರೋಹನ್ ಸಾವನ್ನಪ್ಪುತ್ತಾನೆ. ಇದರೊಂದಿಗೆ ಅವರನ್ನು ನಂಬಿಕೊಂಡಿರುವ ಹೆಂಡತಿ ಮತ್ತು ಮಕ್ಕಳಿಗೆ ಯಾವುದೇ ಹಣಕಾಸು ಬೆಂಬಲ ಇಲ್ಲದಂತಾಗುತ್ತದೆ.
- ಸಿಂಧುವಿನ ಕಾರು ಅಪಘಾತಕ್ಕೆ ಒಳಗಾಯಿತು. ಅದನ್ನು ದುರಸ್ತಿ ಮಾಡಲು ಸಾಕಷ್ಟು ಹಣಕಾಸಿನ ಅವಶ್ಯಕತೆ ಇದೆ.
- ಸಂಧಿವಾತದಿಂದ ಬಳಲುತ್ತಿರುವ ಮೋಹಿತ್‌ಗೆ ಪ್ರತಿ ತಿಂಗಳು ಫಿಸಿಯೋಥೆರಪಿಗೆ ಸಾಕಷ್ಟು ಹಣದ ಅಗತ್ಯವಿದೆ.

ಮೇಲೆ ಪ್ರಸ್ತಾಪ ಮಾಡಿದ ಎಲ್ಲ ಪರಿಸ್ಥಿತಿಗಳಲ್ಲಿ ತಗುಲಬಹುದಾದ ವೆಚ್ಚವನ್ನು ಭರಿಸಲು ಸಾಕಷ್ಟು ಆದಾಯವೇ ಬೇಕಾಗುತ್ತದೆ. ಇಂತಹ ಪರಿಸ್ಥಿತಿಗಳಿಂದ ಪಾರಾಗಲು ಸೂಕ್ತವಾದ ವಿಮಾ ಪಾಲಿಸಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಅನಿವಾರ್ಯ. ಇದರಿಂದ ನಿಮ್ಮ ಆದಾಯದ ಬಹುಪಾಲು ಮೊತ್ತ ಕರಗುವುದು ತಪ್ಪುತ್ತದೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಎದುರಾಗಬಹುದಾದ ಸಾವು, ರೋಗ, ಅಂಗವಿಕಲತೆ ಮತ್ತು ಹಾನಿಯಿಂದ ಪಾರಾಗಲು ಎಲ್ಲ ಸೌಲಭ್ಯಗಳನ್ನೂ ಒಳಗೊಂಡ ವಿಮಾ ಪಾಲಿಸಿಯನ್ನು ಹೊಂದುವುದು ಅಗತ್ಯ.

ಒಂದು ವೇಳೆ ರೋಹನ್ ಸಾಕಷ್ಟು ಮೊತ್ತದ ಜೀವ ವಿಮಾ ಪಾಲಿಸಿಯನ್ನು ಹೊಂದಿದ್ದರೆ ಅವರ ಸಾವಿನಿಂದ ಆಗಿರುವ ಆಘಾತವನ್ನು ಅವರ ಕುಟುಂಬ ತಡೆದುಕೊಳ್ಳಲು ಸಾಧ್ಯವಾಗುತ್ತಿತ್ತು. ಅದೇ ರೀತಿ ಮೋಟರ್ ವಿಮಾ ಪಾಲಿಸಿಯನ್ನು ಹೊಂದಿದ್ದರೆ ಸಿಂಧುವಿನ ಕಾರು ದುರಸ್ತಿ ವೆಚ್ಚವನ್ನು ಭರಿಸಲು ಅನುಕೂಲವಾಗುತ್ತಿತ್ತು ಮತ್ತು ಅದರಿಂದ ಆಕೆಯ ಉಳಿತಾಯದ ಮೇಲೆ ಯಾವುದೇ ಪರಿಣಾಮ ಬೀರುವುದು ತಪ್ಪುತ್ತಿತ್ತು. ಅದೇ ರೀತಿ ಒಂದು ಆರೋಗ್ಯ ವಿಮಾ ಪಾಲಿಸಿ ಇದ್ದಿದ್ದರೆ ಮೋಹಿತ್‌ನ ಫಿಸಿಯೋಥೆರಪಿ ವೆಚ್ಚವನ್ನು ಭರಿಸಲು ಕಷ್ಟವಾಗುತ್ತಿರಲಿಲ್ಲ.

ನಿಮ್ಮ ಸಂಪತ್ತು ಅಥವಾ ಹಣಕಾಸು ಸಂರಕ್ಷಣೆಯ ದೃಷ್ಟಿಯಿಂದ ವಿಮೆ ಎನ್ನುವುದು ಅತ್ಯಂತ ಮುಖ್ಯವಾದ ಉತ್ಪನ್ನವಾಗಿದೆ. ಯಾರೇ ಒಬ್ಬ ವ್ಯಕ್ತಿ ಹಣಕಾಸಿನ ಯೋಜನೆ ಮಾಡುತ್ತಿರಲಿ ಮತ್ತು ಹಣಕಾಸು ಯೋಗಕ್ಷೇಮದ ಬಗ್ಗೆ ಯೋಚಿಸುತ್ತಿರಲಿ, ವಿಮೆ ಎನ್ನುವುದು ಅತ್ಯಂತ ಮುಖ್ಯ ಎಂಬುದಕ್ಕೆ ಇಲ್ಲಿವೆ ಕೆಲವು ಕಾರಣಗಳು:

### 1. ಹಣಕಾಸು ಭದ್ರತೆ

ನೀವು ಎಷ್ಟಾದರೂ ಗಳಿಕೆ ಮಾಡುತ್ತಿರಲಿ ಅಥವಾ ನೀವು ಎಷ್ಟಾದರೂ ಉಳಿತಾಯ ಮಾಡುತ್ತಿರಲಿ ಒಂದು ಅನಿರೀಕ್ಷಿತ ಘಟನೆಯಿಂದ ನಿಮ್ಮ

ಅಷ್ಟೂ ಹಣಕಾಸು ಸ್ಥಿತಿ ಕ್ಷಣಾರ್ಧದಲ್ಲಿ ಸಂಕಷ್ಟಕ್ಕೆ ಸಿಲುಕಿಬಿಡಬಹುದು. ಈ ಕಾರಣಗಳಿಂದಾಗಿ ನಿಮ್ಮನ್ನು, ನಿಮ್ಮ ಕುಟುಂಬವನ್ನು ಮತ್ತು ನಿಮ್ಮ ಆಸ್ತಿಯನ್ನು ವಿಮೆಯ ಚೌಕಟ್ಟಿನೊಳಕ್ಕೆ ತಂದು ನೀವು ಹಣಕಾಸು ವಿಚಾರದಲ್ಲಿ ಭದ್ರವಾಗುವುದು ಒಳಿತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನಚಕ್ರದ ಪ್ರತಿ ಹಂತದಲ್ಲಿಯೂ ಅನಿಶ್ಚಿತತೆಯನ್ನು ಎದುರಿಸುತ್ತಿರುತ್ತಾನೆ. ಅಂತಹ ಸಂದರ್ಭದಲ್ಲಿ ಆಸರೆಯಾಗಿ ನಿಲ್ಲುವುದು ವಿಮಾ ಪಾಲಿಸಿಗಳು ಎನ್ನುವುದರಲ್ಲಿ ಅನುಮಾನವಿಲ್ಲ. ಇದರಿಂದ ನೀವು ಯಾವುದೇ ಸಂಕಟದ ಸಂದರ್ಭದಲ್ಲಿ ಕಡಿಮೆ ಚಿಂತೆಯೊಂದಿಗೆ ಜೀವನವನ್ನು ಮುಂದುವರಿಸಬಹುದು. ಅದರಲ್ಲೂ ಮುಖ್ಯವಾಗಿ ವೈದ್ಯಕೀಯ ಬಿಲ್‌ಗಳು, ಅಡಮಾನ, ಸಾಲ ಮತ್ತಿತರ ಹೊರೆಗಳ ಭಾರವನ್ನು ತಗ್ಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಂದು ಉದಾಹರಣೆಯನ್ನು ಕೊಡುವುದಾದರೆ ಪ್ರತಿ ವರ್ಷದ ವೈದ್ಯಕೀಯ ಹಣದುಬ್ಬರ ಶೇ.15ರಷ್ಟು ಎಂದು ಅಂದಾಜಿಸಲಾಗುತ್ತದೆ. ಒಂದು ಸರಳ ವೈದ್ಯಕೀಯ ಪ್ರಕ್ರಿಯೆಗಳಿಂದ ನೀವು ಅತ್ಯಂತ ಲೆಕ್ಕಾಚಾರದಿಂದ ಕಾಯ್ದುಕೊಂಡು ಬಂದಿದ್ದ ಬಜೆಟ್‌ನ್ನು ತಲೆಕೆಳಗು ಮಾಡಿಬಿಡಬಹುದು. ಆದರೆ ಒಂದು ಆರೋಗ್ಯ ವಿಮೆ ಇವೆಲ್ಲ ತಲೆನೋವಿಗೆ ಮದ್ದಾಗಬಹುದು.

### 2. ಸ್ಥಗಿತಗೊಳ್ಳದ ಜೀವನದ ಗುರಿಗಳು

ದುರದೃಷ್ಟಕರ ಘಟನೆಗಳಿಂದ ಉಂಟಾಗಬಹುದಾದ ಹಣಕಾಸಿನ ಪರಿಣಾಮವನ್ನು ತಗ್ಗಿಸುವ ಕ್ರಮವಾಗಿ ನಾವು ಕೇವಲ ಈಗಿನ ಸ್ಥಿತಿಯಿಂದ ಪಾರಾಗುವುದು ಮಾತ್ರವಲ್ಲದೆ ಭವಿಷ್ಯದಲ್ಲಿ ಪ್ರತಿಯೊಬ್ಬರನ್ನೂ ಸಂರಕ್ಷಿಸುವ ಕೆಲಸವನ್ನು ಕೂಡ ಮಾಡಬೇಕು. ಯಾವುದೇ ಘಟನೆಗಳ ಹೊರತಾಗಿಯೂ ನಮ್ಮ ಜೀವನ ತನ್ನ ಗತಿಯನ್ನು ಮುಂದುವರಿಸಬೇಕು. ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿಯೂ ಕೂಡ ನಮ್ಮ ಸೂಕ್ತ ವಿಮಾ ಸೌಲಭ್ಯಗಳಿಂದ ರಕ್ಷಣೆ ದೊರೆಯಬೇಕು. ಅಂದರೆ ಮನೆ ಖರೀದಿ, ಮಕ್ಕಳ ಶಿಕ್ಷಣ, ಮಕ್ಕಳ ಮದುವೆ ಮುಂತಾದ ಜೀವನದ ನಿರ್ಣಾಯಕ ಗುರಿಗಳೊಂದಿಗೆ ರಾಜಿ ಮಾಡಿಕೊಳ್ಳಬಾರದು. ವಿಮಾ ಪಾಲಿಸಿಗಳ ಕ್ಲೈಮ್ ಪ್ರಕ್ರಿಯೆಯಿಂದ ದಕ್ಕುವ ಹಣಕಾಸು ಬೆಂಬಲದೊಂದಿಗೆ ದುರಂತಗಳಿಂದ ಚೇತರಿಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು. ಇದು ಸಾಲವನ್ನು ತೀರಿಸಿಕೊಳ್ಳಲು ಕೂಡ ನೆರವಾಗಬಹುದು.

### 3. ಮಾನಸಿಕ ನೆಮ್ಮದಿ

ನೀವು ಜೀವನದಲ್ಲಿ ಎದುರಿಸಬಹುದಾದ ನಾನಾ ರೀತಿಯ ಅಪಾಯಗಳನ್ನು ಕವರ್ ಮಾಡುವಂತಹ ನಾನಾ ಸ್ವರೂಪದ ವಿಮಾ ಯೋಜನೆಗಳು ಲಭ್ಯವಿವೆ. ಹಾಗಾಗಿ ನೀವು ಎದುರಿಸಬಹುದಾದ ಅಪಾಯದ ಆಧಾರದಲ್ಲಿ ನಾನಾ ಪಾಲಿಸಿಗಳನ್ನು ಆಯ್ಕೆ ಮಾಡಿಕೊಂಡು 360 ಡಿಗ್ರಿಯಷ್ಟು ಸಂಪೂರ್ಣ ಭದ್ರತೆಯನ್ನು ಪಡೆಯಬಹುದಾಗಿದೆ. ಸಾಕಷ್ಟು ಪ್ರಮಾಣದ ಮತ್ತು ವಿಶಾಲ ವ್ಯಾಪ್ತಿಯನ್ನು ಹೊಂದಿರುವ ವಿಮಾ ಸೌಲಭ್ಯವು ನಿಮಗೆ ಮಾನಸಿಕ ನೆಮ್ಮದಿಯನ್ನೂ ನೀಡುತ್ತದೆ. ಯಾವ ಹಣವೂ ಇದನ್ನು ಭರಿಸಲಾರದು. ವಿಮಾ ಪಾಲಿಸಿಗಳನ್ನು ಹೊಂದುವುದರಿಂದ ನೀವು ಮತ್ತು ನಿಮ್ಮ ಕುಟುಂಬದ ಸದಸ್ಯರು ಜೀವನದಲ್ಲಿ ಸಂಭವಿಸಬಹುದಾದ ಯಾವುದೇ ಘಟನೆಗಳಿಂದ ಸಂಪೂರ್ಣ ಹಣಕಾಸು ಭದ್ರತೆಯನ್ನು ಪಡೆದಿರುತ್ತಾರೆ. ಯಾವುದೇ ತುರ್ತು ಪರಿಸ್ಥಿತಿ ಉಂಟಾದರೂ ಕೂಡ ಅದನ್ನು ನಿಭಾಯಿಸುವ ಶಕ್ತಿ ನಿಮಗೆ ದಕ್ಕಿರುತ್ತದೆ. ಉದಾಹರಣೆಗೆ ನಿಮಗೆ ಯಾವುದೇ ವೈದ್ಯಕೀಯ ತುರ್ತು ಸ್ಥಿತಿ ಉಂಟಾದರೆ ಸಾಕಷ್ಟು ಪ್ರಮಾಣದ ಆರೋಗ್ಯ ವಿಮಾ ಸೌಲಭ್ಯದಿಂದ ಅಗತ್ಯವಿರುವ ವೈದ್ಯಕೀಯ ಚಿಕಿತ್ಸೆಯ ಮೂಲಕ ಅದನ್ನು ಭರ್ತಿ ಮಾಡಿಕೊಳ್ಳಬಹುದು. ನೀವು ಜೀವ ವಿಮೆಯನ್ನು ಹೊಂದುವುದರಿಂದ ನಿಮ್ಮ ಗೈರಿನಲ್ಲಿ ನಿಮ್ಮ ಕುಟುಂಬ ಹಣಕಾಸು ವಿಚಾರದಲ್ಲಿ ಯಾವುದೇ ತೊಂದರೆ ಅನುಭವಿಸದಂತೆ ಖಾತರಿಯನ್ನು ನೀಡುತ್ತದೆ.

### 4. ತೆರಿಗೆ ಪ್ರಯೋಜನಗಳು

ಜೀವ ವಿಮೆ ಮತ್ತು ಆರೋಗ್ಯ ವಿಮಾ ಪಾಲಿಸಿಗಳು 80ಸಿ ಮತ್ತು 80ಡಿ ಅಡಿಯಲ್ಲಿ ತೆರಿಗೆ ಉಳಿತಾಯದ ಹೆಚ್ಚುವರಿ ಪ್ರಯೋಜನಗಳನ್ನು ಒದಗಿಸಲಿದೆ. ಇಷ್ಟು ಮಾತ್ರವಲ್ಲದೆ ಜೀವ ವಿಮಾ ಯೋಜನೆಗಳ ಅಡಿಯಲ್ಲಿ ದೊರೆಯುವ ಮೆಚ್ಯುರಿಟಿ ಮತ್ತು ಮರಣ ಪ್ರಯೋಜನಗಳು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 10(10ಡಿ) ಪ್ರಕಾರ ತೆರಿಗೆ ವಿನಾಯ್ತಿಯನ್ನು ಕೂಡ ಪಡೆಯುತ್ತವೆ. ಆದರೆ ಈ ತೆರಿಗೆ ಪ್ರಯೋಜನಗಳನ್ನು ಯಾವುದೇ ವಿಮಾ ನಿರ್ಧಾರದ ಪ್ರಾಥಮಿಕ ಉದ್ದೇಶವಾಗಿ ಪರಿಗಣಿಸಬಾರದು. ಅದು ಉಪ-ಉತ್ಪನ್ನವಾಗಿ ಪ್ರಯೋಜನವನ್ನು ನೀಡುತ್ತದೆ.

### 5. ಉಳಿತಾಯ ಮತ್ತು ಹೂಡಿಕೆ

ಹಣಕಾಸು ಸಂಬಂಧಿ ಅಪಾಯಗಳಿಗೆ ಪ್ರತಿಯಾಗಿ ರಕ್ಷಣೆಯನ್ನು ನೀಡುವ ಪ್ರಾಥಮಿಕ ಉದ್ದೇಶದ ಜೊತೆಗೆ ಕೆಲವು ವಿಮಾದಾರರು ನೀಡುವ ಉತ್ಪನ್ನಗಳಲ್ಲಿಯೇ ಉಳಿತಾಯ ಮತ್ತು ಹೂಡಿಕೆ ಯೋಜನೆಗಳು ಕೂಡ ಅಂತರ್ಗತವಾಗಿರುತ್ತವೆ. ಈ ಉಳಿತಾಯ ಯೋಜನೆಗಳು ಸುರಕ್ಷತೆ ಮತ್ತು ಹೂಡಿಕೆ ನೀತಿಗಳನ್ನು ಕೂಡ ಹೊಂದಿದ್ದು ಇದರಲ್ಲಿ ಮೂಲಭೂತವಾದ ವಿಮಾ ಸೌಲಭ್ಯದ ಜೊತೆಗೇ ಶಿಸ್ತುಬದ್ಧವಾದ ಮತ್ತು ನಿಯತಕಾಲಿಕವಾದ ಉಳಿತಾಯ ಯೋಜನೆಗಳೂ ಒಳಗೊಂಡಿರುತ್ತವೆ. ಎಂಡೋಮೆಂಟ್ ಸೇವಿಂಗ್ಸ್, ಹಣ ವಾಪಸಾತಿ, ಯುಎಲ್‌ಐಪಿಗಳು ಅಥವಾ ಯುನಿಟ್ ಆಧಾರಿತ ವಿಮಾ ಯೋಜನೆಗಳು ಮತ್ತು ವಾರ್ಷಿಕ ಯೋಜನೆಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಉದ್ಯಮದಲ್ಲಿ ಇಂತಹ ಉತ್ಪನ್ನಗಳು ಜನಪ್ರಿಯವಾಗಿದ್ದರೂ ಕೂಡ ಅಂತಹ ಉತ್ಪನ್ನಗಳು ನಿರ್ದಿಷ್ಟ ರೀತಿಯ ಗ್ರಾಹಕರ ಅವಶ್ಯಕತೆಗಳನ್ನು ಮಾತ್ರ ಪೂರೈಸುತ್ತವೆ. ಹಾಗಾಗಿ ಅಂತಹ ಉತ್ಪನ್ನಗಳು ನಿಮ್ಮ ಅಗತ್ಯಗಳನ್ನು ಪೂರೈಸುವುದೇ ಇಲ್ಲವೇ ಎಂಬುದನ್ನು ನಿಮ್ಮ ವಿಮಾ ಸಲಹೆಗಾರರು/ಏಜೆಂಟ್‌ಗಳ ಸಹಾಯದಿಂದ ಪಡೆದುಕೊಳ್ಳಬಹುದು.

### ಬಾಟಮ್ ಲೈನ್:

ಜೀವನ ಆಗಾಗ ಅಚ್ಚರಿಗಳನ್ನು ನೀಡುತ್ತ ಹೋಗುತ್ತದೆ. ಇಂತಹ ಅಚ್ಚರಿಗಳಿಂದ ಉಂಟಾಗಬಹುದಾದ ಹಣಕಾಸು ಆಘಾತಗಳನ್ನು ಹೀರಿಕೊಳ್ಳಲು ನಿಮಗೆ ತುರ್ತಿ ಯೋಜನೆಯ ಅಗತ್ಯವಿರುತ್ತದೆ. ಸೂಕ್ತವಾದ, ಪೂರ್ಣ ಪ್ರಮಾಣದ ವಿಮಾ ಅಗತ್ಯದ ಮೌಲ್ಯಮಾಪನ ಮಾಡುವುದು ನಿಮ್ಮ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ಇರುವ ಆರಂಭಿಕ ಹಂತ ಎಂದು ಅಂದಾಜಿಸಬಹುದು. ಸಮಗ್ರ ವಿಮಾ ಸೌಲಭ್ಯವನ್ನು ಹೊಂದಿರುವ ವಿಮಾ ಪಾಲಿಸಿ ಇಂದು ನಿಮಗೆ ಸಲ್ಪ ಮಟ್ಟಿಗೆ ದುಬಾರಿ ಎನ್ನಿಸಬಹುದು. ಆದರೆ ಅದು ನಿಮ್ಮ ಅಗತ್ಯದ ದಿನಗಳಲ್ಲಿ ನಿಜಕ್ಕೂ ಸಹಾಯ ಮಾಡುತ್ತದೆ.


## ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN-79020)

ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080-42129917

Mail: info@inspireindiafs.com

**ನಮ್ಮ ಸೇವೆಗಳು**

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD

@ 65, 'Surasa Enclave', 1st Floor, Puttanna Road,
Gandhi Bazar, Basavanagudi, Bengaluru-560004



**ಹಕ್ಕುತ್ಯಾಗ**

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.